# ಸದಾಶಿವರಾಯನ ಕಾರ್ಯಕರ್ತ: (ಅಳಿಯ) ರಾಮರಾಜಯ್ಯ

**ಎನ್. ಎಸ್. ವೀರೇಶ ಉತ್ತಂಗಿ**

೪ ನೇ ವಾರ್ಡ್, ಉತ್ತಂಗಿ (ಅಂಚೆ), ಹೂವಿನಹಡಗಲಿ
ತಾಲೂಕು, ವಿಜಯನಗರ ಜಿಲ್ಲೆ.

**Received: 28/09/2024 ; Acepted: 10/11/2024 ; Published: 06/12/2024**

**DOI: https://doi.org/10.5281/zenodo.14289998**

## ABSTRACT:

ವಿಜಯನಗರ ಸಾಮ್ರಾಜ್ಯ ಜಗದ್ವಿಖ್ಯಾತಗೊಂಡದ್ದು ಮೊದಲು ಸಂಗಮ ಅರಸ ಪ್ರೌಢದೇವರಾಯನ ಕಾಲದಲ್ಲಿ ನಂತರ ಮತ್ತೆ ಅದು ಉಚ್ಛ್ರಾಯಸ್ಥಿತಿ ತಲುಪಿದ್ದು ಶ್ರೀಕೃಷ್ಣ ದೇವರಾಯನ ಕಾಲದಲ್ಲಿ ಎಂಬುದು ಅನೇಕ ಶಾಸನಗಳು ವಿದೇಶಿ ಪ್ರವಾಸಿಗರ ಬರವಣಿಗೆಗಳಿಂದ ತಿಳಿದು ಬರುತ್ತದೆ. ಇದಕ್ಕೆ ಕಾರಣ ಆ ಅರಸರು ನೇಮಿಸಿಕೊಂಡಿದ್ದ ಮಂತ್ರಿಗಳು ಮತ್ತು ಸೇನಾ ದಂಡನಾಯಕರು ಎಂದು ತಿಳಿದು ಬರುತ್ತದೆ. ಒಂದು ಸಾಮ್ರಾಜ್ಯ ಉನ್ನತಿ ಮತ್ತು ಅವನತಿ ಕಾಣಲು ಆ ಸಾಮ್ರಾಜ್ಯದ ಸೇನೆಯ ಮುಂದಾಳತ್ವವಹಿಸುವ ದಂಡಾನಾಯಕರನ್ನು ಅವಲಂಬಿಸಿದೆ. ಅಂಥ ಸೇನಾದಂಡನಾಯಕರಲ್ಲಿ ಅಳಿಯ ರಾಮರಾಯನೂ ಒಬ್ಬ. ಈತನನ್ನು ಅಖಂಡ ಬಳ್ಳಾರಿ ಜಿಲ್ಲೆಯ ಶಾಸನಗಳು ಅಳಿಯ ರಾಮರಾಜಯ್ಯ, ಅಳಿಯ ರಾಮರಾಜ ಅರಸು, ರಾಮರಾಜ ಮಹಾಅರಸು ಎಂದು ಕರೆದಿವೆ. ಶಾಸನಗಳಲ್ಲಿ ಬರುವ ಅಳಿಯ ರಾಮರಾಜ ಮತ್ತು ರಾಮರಾಜ ಮಹಾಅರಸು ಇಬ್ಬರೂ ಒಬ್ಬನೇ ಎಂದು ಪ್ರಸ್ತುತ ಸಂಶೋಧನಾ ಲೇಖನದಲ್ಲಿ ಕಂಡುಕೊಳ್ಳಲಾಗಿದೆ.

## KEYWORDS:

ವಿಜಯನಗರ, ಸದಾಶಿವದೇವರಾಯ, ಅಳಿಯ ರಾಮರಾಯ, ಶಾಸನ, ರಾಮರಾಜಯ್ಯ, ರಾಮರಾಜದೇವ, ಬಯಕಾರ ರಾಮಪ್ಪಯ್ಯ.

ಒಂದು ದೇಶದ ಏಳಿಗೆ ಅಭಿವೃದ್ಧಿ ಆ ದೇಶದ ಅಧಿಕಾರದ ಚುಕ್ಕಾಣಿ ಹಿಡಿಯುವ ವ್ಯಕ್ತಿಗಳನ್ನು ಅವಲಂಬಿಸಿರುತ್ತದೆ. ಅದರಂತೆ ವಿಜಯನಗರ ಸಾಮ್ರಾಜ್ಯವು ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದಿ ತುಂಬಾ ವೈಭವೋಪೇತವಾಗಿ ಮೆರೆದದ್ದು ಪ್ರೌಢದೇವರಾಯ, ಕೃಷ್ಣದೇವರಾಯರಂಥ ಚಕ್ರವರ್ತಿ ಚತುರರಿಂದ ಎಂದರೆ ತಪ್ಪಾಗಲಾರದು. ಇವರು ಸಾಮ್ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಸಹಾಯ ಮಾಡಿದವರು ಲಕ್ಕಣ್ಣ ದಂಡೇಶ, ತಿಮ್ಮರಸರಂಥ ಪ್ರಧಾನಿ, ಅಮಾತ್ಯರು ಹಾಗೂ ಆಪ್ತವಲಯದ ಅಧಿಕಾರಿ ವರ್ಗದವರು ಎಂದು ಹೇಳಬಹುದು. ಹಾಗೆಯೇ ಒಂದು ಸಾಮ್ರಾಜ್ಯದ ಅವನತಿ ಸಹ ಅಧಿಕಾರಿಗಳು, ಅರಸರ ಆಪ್ತರನ್ನು ಅವಲಂಬಿಸಿದೆ.

ವಿಜಯನಗರವು ಸದಾಶಿವರಾಯನ ಆಳ್ವಿಕೆಯ ಕಾಲದಲ್ಲಿ ಅವನತಿ ಹೊಂದಿತು. ಈ ಸಂದರ್ಭದಲ್ಲಿ ಸದಾಶಿವರಾಯನಿಗೆ ಆಪ್ತ ಸಲಹೆಗಾರ ಅಥವಾ ಆಪ್ತ ಕಾರ್ಯದರ್ಶಿ ಅಥವಾ ಕಾರ್ಯಕರ್ತ ಆಗಿದ್ದವನು ಅಳಿಯ ರಾಮರಾಯ.

ಪ್ರಸ್ತುತ ಪ್ರಬಂಧದಲ್ಲಿ ಅಳಿಯ ರಾಮರಾಯ ಮತ್ತು ರಾಮರಾಜಯ್ಯ ಎಂಬುವವರು ಒಬ್ಬರೋ ಅಥವಾ ಇಬ್ಬರೂ ಬೇರೆಬೇರೆಯೋ ಎಂಬುದನ್ನು ಕುರಿತು ಅಖಂಡ ಬಳ್ಳಾರಿ ಜಿಲ್ಲೆಯ ರಾಮರಾಯನ ಶಾಸನಗಳನ್ನು ಆಧರಿಸಿ ವಿಶ್ಲೇಷಣೆಗೆ ಒಳಪಡಿಸಿದೆ.

ಭಾರತದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದ ವಿಜಯನಗರ ಸಾಮ್ರಾಜ್ಯದ ಏಳು ಬೀಳುಗಳಲ್ಲಿ ಅಳಿಯ ರಾಮರಾಯನ ಪಾತ್ರವೂ ಇದೆ. ಅಳಿಯ ರಾಮರಾಯನನ್ನು ಕುರಿತು ಅಖಂಡ ಬಳ್ಳಾರಿ ಜಿಲ್ಲೆಯಲ್ಲಿ ಕೇವಲ ೨ ಶಾಸನಗಳು (ದೊರೆಯುತ್ತವೆ) ಉಲ್ಲೇಖಿಸುತ್ತವೆ. ಈ ಶಾಸನಗಳು ಅಳಿಯ ರಾಮರಾಯನ್ನು ಅಳಿಯ ರಾಮರಾಜ ಅರಸು ಅಳಿಯ ರಾಮರಾಜಯ್ಯ ಎಂದು ಕರೆದಿವೆ.

ಕೆಲವು ಶಾಸನಗಳು ರಾಮರಾಜದೇವ, ರಾಮರಾಜಯ್ಯ ಮಹಾಅರಸು ಎಂದು ಕರೆದಿವೆ. ಈ ಎಲ್ಲಾ ಶಾಸನಗಳಲ್ಲಿ ಬರುವ ರಾಮರಾಜ ಎಂಬ ಪದವು ಅಳಿಯ ರಾಯನೇ ಆಗಿರಬಹುದಾಗಿದೆ.

ಬಳ್ಳಾರಿ ತಾಲೂಕು, ಯಳಪಿ ಗ್ರಾಮದ ಆಂಜನೇಯ ಗುಡಿಯ ಬಳಿ ಇರುವ ಸದಾಶಿವರಾಯನ ಕ್ರಿ.ಶ ೧೪-೩-೧೫೪೪ ರ ಕಾಲದ ಶಾಸನವು (ತ್ರುಟಿತ)

**“ಶ್ರೀ ವೀರಪ್ರತಾಪ ಸದಾಶಿವದೇವ ಮಹಾರಾಯರ**
**ಕಾರ್ಯಕೆ ಕರ್ತರದಂಥಾ ಶ್ರೀ ಮ..................**
**ಮಂಡಲೇಶ್ವರ ರಾಮರಾಜಯ್ಯದೇವ ಮಹಾಅರಸು**
**(ಗಳು) ಯಳಪ್ಪೆಯ ಸೀಮೆಯ ನಾಯಿಂದವೋಜಗಳು.........”[೧]**

ಎಂದು ದಾಖಲಿಸಿದೆ. ಈ ಶಾಸನವು ಮಹಾಮಂಡಲೇಶ್ವರನಾದ ರಾಮರಾಜಯ್ಯದೇವ ಮಹಾಅರಸನು ವೀರಪ್ರತಾಪ ಸದಾಶಿವದೇವರಾಯನ ಕಾರ್ಯಕರ್ತನಾಗಿದ್ದನೆಂದು ತಿಳಿಸುತ್ತದೆ. ಕಾರ್ಯಕರ್ತನೆಂದರೆ ನೀಡಿದ ಕೆಲಸವನ್ನು ಅತ್ಯಂತ ಶ್ರದ್ಧೆ ನಿಷ್ಠೆಯಿಂದ ಮಾಡುವ ವ್ಯಕ್ತಿ. (ಆಪ್ತಸಹಾಯಕ, ಆಪ್ತಕಾರ್ಯದರ್ಶಿ ಎಂದು ಅರ್ಥ ನೀಡಬಹುದು). ವಿಜಯನಗರ ಕಾಲಕ್ಕೆ ಅನ್ವಯಿಸಿ ಇದಕ್ಕೆ ಅರ್ಥ ನೀಡುವುದಾದರೆ ಅರಸನ ಆಡಳಿತಕ್ಕೆ ಸಹಾಯ ಮಾಡುವವನು, ಅರಸನ ಪರವಾಗಿ ಆಡಳಿತ ನಡೆಸುವವನು, ರಾಜಪ್ರತಿನಿಧಿ ಎಂದು ಹೇಳಬಹುದಾಗಿದೆ. ಈ ರಾಮರಾಜಯ್ಯನು ಯಳಪಿ ಸೀಮೆವೊಳಗಣ ನಾಯಿಂದರಿಗೆ ಕೆಲವು ತೆರಿಗೆಗಳನ್ನು

ಮಾನ್ಯ ಮಾಡಿರುವುದನ್ನು ತಿಳಿಸುತ್ತದೆ.

ಇದೇ ರಾಮರಾಜದೇವನು ಸೊಂಡೂರು ಸೀಮೆಗೆ ಸಲ್ಲುವ ನಾಯಿಂದರಿಗೆ ಕೆಲವು ತೆರಿಗೆಗಳನ್ನು ಮಾನ್ಯ ಮಾಡಿರುವುದನ್ನು ಸೊಂಡೂರಿನ ತಾರಕೇಶ್ವರ ದೇವಾಲಯದ ಮುಂದೆ ಬರೆದಿರುವ ಸದಾಶಿವದೇವರಾಯನ ಆಳ್ವಿಕೆಯ "ಕ್ರಿಶ ೨೬–೫–೧೫೪೪ರ"[೨] ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ಎರಡೂ ಶಾಸನಗಳಲ್ಲಿ ಬರುವ ರಾಮರಾಜದೇವ ಮಹಾಮಂಡಳೇಶ್ವರನಾಗಿದ್ದಾನೆ.

ಈ ಎರಡೂ ಶಾಸನಗಳಲ್ಲಿ ರಾಮರಾಜದೇವ ಯಾವ ಪ್ರಾಂತದ ಮಹಾಮಂಡಳೇಶ್ವರನಾಗಿದ್ದನೆಂಬುದನ್ನು ದಾಖಲಿಸಿರುವುದಿಲ್ಲ. ಈ ರಾಮರಾಜಯ್ಯನೇ ಅಳಿಯ ರಾಮರಾಯ ಎಂಬುದನ್ನು ಹಗರಿಬೊಮ್ಮನಳ್ಳಿ ತಾಲೂಕಿನ ಮಗಿಮಾವಿನಹಳ್ಳಿಯ ವೀರಭದ್ರದೇವಾಲಯದ ಮುಂದೆ ಇರುವ ದಿನಾಂಕ: ೦೯–೦೩–೧೫೪೪ರ ಶಾಸನವು

**"ಅಳಿಯ ರಾಮರಾಜಯ್ಯನವರು ತಂಮ**
**ಮದವಳಿಗೆ ಕೊಮಾರ್ತಿ ತಿರುಮಲಂಮಗೆ**
**ಪುಣ್ಯವಾಗಬೇಕೆಂದು ಅವರ ಹೆಸರು ಮಾಡಿದ**
**ಚಿಕತಿಂಮಾಪುರವೆಂಬ ಅಗ್ರಹಾರ .........."[೩]**

ಎಂದು ಉಲ್ಲೇಖಿಸುತ್ತದೆ.

ಈ ಶಾಸನವು ಅಳಿಯ ರಾಮರಾಜಯ್ಯನು ತನ್ನ ಮಗಳು ತಿರುಮಲಮ್ಮನಿಗೆ ಪುಣ್ಯವಾಗಲೆಂದು ಚಿಕ್ಕತಿಮ್ಮಾಪುರ ಎಂಬ ಅಗ್ರಹಾರ ಮಾಡಿಸಿದ್ದನ್ನು ತಿಳಿಸುತ್ತದೆ. ಇದರಲ್ಲಿ ರಾಮರಾಜನನ್ನು 'ಮಹಾಮಂಡಳೇಶ್ವರ' ಎಂದು ಕರೆದಿರುವುದಿಲ್ಲ. ಮುಂದುವರೆದು

**"ರಾಮಯ ಮಂತ್ರಿವರ್ಯ: ॥ ಪ್ರಖ್ಯಾತಾಚ್ಯುತದೇವ**
**ರಾಜನೃಪತೇಸಂಪ್ರಾಪ್ತಮುಕ್ತಾಮಣಿ ಛತ್ರಾದ್ಯಾನಘ**
**ಕೊಂಡವೀಟಿನಗರೀದುರ್ಗಾಧಿಪತ್ಯೋಜ್ವಲಃ**
**ರಾಮಾಮಾತ್ಯ ಶಿಖಾಮಣಿ.................."[೪]**

ಎಂದು ದಾಖಲಿಸಿದೆ.

ಇದರ ಪ್ರಕಾರ ರಾಮರಾಜಯ್ಯನು ಅಚ್ಯತರಾಯನಿಗೆ ಮಂತ್ರಿಯಾಗಿದ್ದನು. ಅಚ್ಯುತರಾಯನ ಮಂತ್ರಿಗಳಲ್ಲಿಯೇ ಸರ್ವಶ್ರೇಷ್ಠನಾಗಿದ್ದನು. ಕುರುಗೋಡಿನ ದಿನಾಂಕ: ೨೮–೧೨–೧೫೪೫ರ ಶಾಸನವು

**"ಶ್ರೀ ವೀರಸದಾಶಿವರಾಯ ಮಹಾರಾಯರು**
**ಪೃಥ್ವೀರಾಜ್ಯಂಗೆಯುತಯಿರಲು ಶ್ರೀಮ(ೊ)ನ್**
**ಮಹಾಮಂಡಲೇಶ್ವರ ಕೊಟಗಾರ ರಾಮರಾಜ**
**ವೊಡೆಯರ ಮೊಂಮಕ್ಕಳು ಅಳಿಯ ಲಿಂಗರಾಜಯ**
**ಮಹಾ ಅರಸುಗಳ ಅಂಣಂದಿರು**
**ರಾಮರಾಜಯಗಳು ತಂಮ ತಂದೆ**
**ಮಲ್ಲರಾಜವೊಡೆಯರಿಗೆ ಪು(ೊ)ಣ್ಯವಾಗ**
**ಬೇಕೆಂದು ದೇವರ ಅಮೃತಪಡಿ ನೈವೇದ್ಯಕ್ಕೆ**
**ಕೊಟ ಹೊಲ........"[೫]**

ಎಂದು ದಾಖಲಿಸಲಾಗಿದೆ.

ಈ ಶಾಸನವು ರಾಮರಾಜಯ್ಯನು ತನ್ನ ತಂದೆ ಮಲ್ಲರಾಜ ಒಡೆಯರಿಗೆ ಪುಣ್ಯವಾಗಲೆಂದು ಕುರುಗೋಡು ಜಿನದೇವರ ಅಮೃತಪಡಿ ನೈವೇದ್ಯಕ್ಕೆ ಹೊಲವನ್ನು ದಾನವಾಗಿ ಕೊಟ್ಟ ವಿಚಾರ ತಿಳಿಸುತ್ತದೆ. ಇದರಲ್ಲಿಯೂ ಸಹ ರಾಮರಾಜಯ್ಯನನ್ನು ಮಹಾಮಂಡಲೇಶ್ವರ ಎಂದು ಕರೆದಿದೆ. ಅಲ್ಲದೆ ರಾಮರಾಜಯ್ಯನ ವಂಶಾವಳಿ ನೀಡಿದೆ. ಈ ವಂಶಾವಳಿಯನ್ನು ಹೀಗೆ ನೋಡಬಹುದು.

ಕೋಟಗಾರ ರಾಮರಾಜ ವೊಡೆಯರು
↓
ಮಗ
↓
ಮಲ್ಲರಾಜವೊಡೆಯರು
↓
ಮಕ್ಕಳು
↓ ↓
(?ಅಳಿಯ) ರಾಮರಾಜಯ (ಅಳಿಯ) ಲಿಂಗರಾಜಯದೇವ
↓
ಪತ್ನಿ
ತಿರುಮಲಮ್ಮ (ಕ್ರಿಶ ೧೫೪೪ರ ಶಾಸನ)

ಇಲ್ಲಿ ದಾಖಲಾಗಿರುವ ಕೊಟಗಾರ ಎಂಬ ಪದವು ರಾಮರಾಜಯ್ಯನ ಮನೆತನದ ಹೆಸರೋ ಅಥವಾ ಅವರ ಮೂಲ ನೆಲೆಯನ್ನು ಸೂಚಿಸುತ್ತದೆಯೇ

ಎಂಬುದನ್ನು ಶೋಧಿಸಬೇಕಾಗಿದೆ. ಹಾಗೆಯೇ ರಾಮರಾಜಯ್ಯನ ಅಜ್ಜ ಮತ್ತು ತಂದೆಯ ಹೆಸರಿನ ಜೊತೆಗಿರುವ 'ವೊಡೆಯರು' ಎಂಬ ಪದವು ಅಧಿಕಾರವನ್ನು ಸೂಚಿಸುತ್ತದೆಯೋ ಅಥವಾ ಜಾತಿಯನ್ನು ಸೂಚಿಸುತ್ತದೆಯೋ ಎಂಬುದನ್ನು ಶೋಧಿಸುವ ಅಗತ್ಯವಿದೆ. ಹಡಗಲಿ ತಾಲೂಕು ತಿಮ್ಮಲಾಪುರ ಗ್ರಾಮದ ಕ್ರಿಶ ೧೫೫೫ರ ಶಾಸನವು

**"ಶ್ರೀ ವೀರಪ್ರತಪ ಸದಾಶಿವರಾಯರು**
**ವಿದೆನಗ(ರ)ದಲು ಸಿಂಹಾಸನವ ಸ್ತಿರರಜ್ಜೆ**
**ಆಳಲಿಕೆ ಅಳಲಿಕೆ ಆಗಿ ಅಳಿಯ ರಾಮರಾಜ**
**ಅರಸುಗಳು (ವಿ)(ಠ)ಲಪ್ಪ ಒಡೆಯರು ಆ(ಳು)**
**ವ ಸೀಮೆಯ ವಳಗಾ ಗುತ್ತವಳಲ ಸೀಮೆಗೆ**
**ಸಲುವ ಹಕಹಂದಿಗನೂರು ಗ್ರಾಮ........."[೬]**

ಎಂದಿದೆ.

ಇದು ಸದಾಶಿವ ರಾಯನು ವಿದ್ಯಾನಗರದಿಂದ ಆಳುತ್ತಿದ್ದಾಗ ಅಳಿಯ ರಾಮರಾಜ ಅರಸನು ವಿಠಲಪ್ಪ ಒಡೆಯನ ಜೊತೆಗೂಡಿ ಗುತ್ತವೊಳಲ ಸೀಮೆಯ ಹಕಹಂದಿಗನೂರು ಗ್ರಾಮವನ್ನು ವಿಠಲದ ಸಮೀಪದಲ್ಲಿರುವ ನಂಮ್ಮಾಳ್ವಾರು ದೇವರ ಸೇವೆಗೆ ದಾನ ನೀಡಿದ್ದನ್ನು ತಿಳಿಸುತ್ತದೆ. ಇಲ್ಲಿ ಉಲ್ಲೇಖಿಸಲಾದ ವಿಠಲಪ್ಪ ಒಡೆಯರು ರಾಮರಾಜ ಅರಸನ ಮಗನೋ, ಸಹೋದರನೋ ಆಗಿರಬೇಕೆನಿಸುತ್ತದೆ.

ಹಾಗೆಯೇ ಸಿರಗುಪ್ಪ ತಾಲೂಕಿನ ಅಗಸನೂರು ಗ್ರಾಮದ "ಕ್ರಿಶ ೧೫೫೧ರ"[೭] ಶಾಸನದಲ್ಲಿ ಬರುವ ಮಹಾಮಂಡಲೇಶ್ವರ ರಾಮರಾಜ ಚಿಕಕೊಂಡಯದೇವ ಹಾಗೂ ಬಳ್ಳಾರಿ ತಾಲೂಕಿನ ಯಲ್ಪಿ-ಕಗ್ಗಲ್ಲು ಗ್ರಾಮದ "ಕ್ರಿಶ ೧೫೬೩ರ"[೮] ಶಾಸನದಲ್ಲಿ ಬರುವ ಮಹಾಮಂಡಲೇಶ್ವರ ರಾಮರಾಜ ತಿರುಮಲರಾಜಯದೇವ ಎಂಬ ಹೆಸರುಗಳು ಅಳಿಯ ರಾಮರಾಯನಿಗೆ ಸಂಬಂಧವಿಸಿವೇ? ಅಥವಾ ಈ ವ್ಯಕ್ತಿಗಳು ಅಳಿಯ ರಾಮರಾಯನ ಬಂಧುಗಳೋ ಅಥವಾ ಸೋದರ ಸಂಬಂಧಿಗಳಿರಬಹುದೇ? ಎಂಬುದನ್ನು ಶೋಧಿಸಬೇಕಾಗಿದೆ.

ಇಲ್ಲಿ 'ಅಳಿಯ' ಎಂಬ ಪದವು ವ್ಯಕ್ತಿಯನ್ನು ಗುರುತಿಸುವ ಸಲುವಾಗಿ ಬಳಸಿರ ಬಹುದಾದ ಸಾಧ್ಯತೆ ಇದೆ. ಏಕೆಂದರೆ ರಾಮರಾಯನ ಹೆಸರಿನ ಅನೇಕ ವ್ಯಕ್ತಿಗಳು ಅಚ್ಯತದೇವರಾಯ, ಸದಾಶಿವದೇವರಾಯನ ಕಾಲದಲ್ಲಿ ವಿವಿಧ ಪ್ರದೇಶಗಳಲ್ಲಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ.

ಇದೇ ಕಾಲದಲ್ಲಿ ಬರುವ ವಿಜಯನಗರ ಅಧಿಕಾರಿ "ಬಯಕಾರ ರಾಮಪ್ಪಯ್ಯನಿಗೂ (ಕ್ರಿಶ ೧೫೪೯ ಹೊ.ಶಾ) ಅಳಿಯ ರಾಮರಾಯನಿಗೂ ಹತ್ತಿರದ

ಸಂಬಂಧವಿದೆಯೇ ಎಂಬುದನ್ನು ಚಿಂತಿಸಬೇಕಾಗಿದೆ. ಏಕೆಂದರೆ ಬಯಕಾರ ರಾಮಪ್ಪಯ್ಯನ ಶಾಸನಗಳೇ ಹೆಚ್ಚು ಸಿಗುತ್ತವೆ. ಇವರಿಬ್ಬರೂ ಸಮಾನ ಅಧಿಕಾರಿಗಳಾಗಿದ್ದಂತೆ ತೋರುತ್ತದೆ. ಇಬ್ಬರ ಶಾಸನಗಳಲ್ಲಿಯೂ "ರಾಮಾಮಾತ್ಯಶೀಖಾಮಣಿ"[೯] ಎಂಬ ಬಿರುದು ಕಾಣಿಸಿಕೊಂಡಿದೆ.

ರಾಮರಾಜಯ್ಯನ ಹೆಸರಿನಲ್ಲಿ ಬಳಕೆಯಾಗಿರುವ ಕಾರ್ಯಕರ್ತ ಎಂಬ ಪದವು ಊಳಿಗವನ್ನು ಸೂಚಿಸುತ್ತದೆಯೋ, ಅಧಿಕಾರಿ ವರ್ಗವನ್ನು ಸೂಚಿಸುತ್ತದೆಯೋ ಅಥವಾ ಅದೊಂದು ಹುದ್ದೆಯೋ ಎಂಬುದನ್ನು ನಾವು ಆಳವಾಗಿ ಅಧ್ಯಯನ ಮಾಡಬೇಕಾಗಿದೆ. ಕುರುಗೋಡು, ಯಳ್ಪಿ, ಮಗಿಮಾವಿನಹಳ್ಳಿ, ಚಿಕ್ಕತಿಮ್ಮಾಪುರ, ಗ್ರಾಮಗಳ ಶಾಸನಗಳು ಉಲ್ಲೇಖಿಸುವ ರಾಮರಾಜಯ್ಯ, ರಾಮರಾಜ ಅರಸು, ರಾಮರಾಜಯ್ಯ ಮಹಾ ಅರಸು, ಎಂಬ ಹೆಸರುಗಳು ಅಳಿಯ ರಾಮರಾಯನನ್ನು ಪರ್ಯಾಯವಾಗಿ ಸೂಚಿಸುತ್ತವೆ ಎಂದು ಹೇಳಬಹುದು.

**ಅಡಿ ಟಿಪ್ಪಣಿಗಳು:**

1. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ). (1998). ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, ಬಳ್ಳಾರಿ ಜಿಲ್ಲೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. ಪು.ಸಂ. ೮೫
2. ಅದೇ. ಪು.ಸಂ. ೨೦೧
3. ಅದೇ. ಪು.ಸಂ. ೩೦೩
4. ಅದೇ. ಪು.ಸಂ. ೩೦೩
5. ಅದೇ. ಪು.ಸಂ. ೨೧
6. ಅದೇ. ಪು.ಸಂ. ೪೦೪
7. ಅದೇ. ಪು.ಸಂ. ೧೦೮
8. ಅದೇ. ಪು.ಸಂ. ೮೬
9. ಅದೇ. ಪು.ಸಂ. ೧೮೫

### ಆಕರ ಗ್ರಂಥ:

1. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ). (1998). ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಬಳ್ಳಾರಿ ಜಿಲ್ಲೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.